# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1706 |
| 2 | ಸದಸ್ಯರ ಹೆಸರು | ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 18-03-2026 |
| 4 | ಉತ್ತರಿಸುವವರು | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |
| | **ಪ್ರಶ್ನೆಗಳು** | **ಉತ್ತರ** |
| ಅ) | ಮೈಸೂರು ಹಾಗೂ ಸುತ್ತಮುತ್ತಲಿನ ಪ್ರಾಂತ್ಯದಲ್ಲಿ ರೇಷ್ಮೆ ಕೃಷಿಯನ್ನು ಅವಲಂಬಿಸಿರುವ ರೈತರ ಸಂಖ್ಯೆ ಎಷ್ಟು; (ವಿವರ ನೀಡುವುದು) | ಮೈಸೂರು ಹಾಗೂ ಸುತ್ತಮುತ್ತಲಿನ ಪ್ರಾಂತ್ಯದಲ್ಲಿರೇಷ್ಮೆ ಕೃಷಿಯನ್ನು ಅವಲಂಬಿಸಿರುವ ರೈತರ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಈ ರೈತರಿಗೆ ಸರ್ಕಾರದ ವತಿಯಿಂದ ರೇಷ್ಮೆ ಉದ್ಯಮಕ್ಕೆ ಬೇಕಾಗುವ ಯಾವ ಯಾವ ಸಾಮಗ್ರಿಗಳನ್ನು ಸರ್ಕಾರ ನೀಡುತ್ತಿದೆ; (ವಿವರ ಒದಗಿಸುವುದು); | ಈ ರೈತರಿಗೆ ಸರ್ಕಾರದ ವತಿಯಿಂದ ರೇಷ್ಮೆ ಉದ್ಯಮಕ್ಕೆ ಬೇಕಾಗುವ ಅಗತ್ಯ ಸಾಮಗ್ರಿಗಳನ್ನು ಖರೀದಿಸಲು ಈ ಕೆಳಕಂಡ ವಿವಿಧ ಯೋಜನೆಗಳಲ್ಲಿ ಸಹಾಯ ಧನವನ್ನು ನೀಡಲಾಗುತ್ತಿದೆ.<br>1. ಎ.ಆರ್.ಎಂ ಘಟಕ ಸ್ಥಾಪನೆಗೆ ಸಹಾಯಧನ<br>2. ಎ.ಆರ್.ಎಂ ಘಟಕಗಳಲ್ಲಿ ಉತ್ಪಾದಿಸಿದ ರೇಷ್ಮೆ ನೂಲಿಗೆ ಪ್ರೋತ್ಸಾಹಧನ<br>3. ಮಲ್ಟಿಎಂಡ್ ಘಟಕಗಳು ಹಾಗೂ ಜನರೇಟರ್, ಬಾಯ್ಲರ್ , ಸೋಲಾರ್ ಘಟಕಗಳಿಗೆ ಸಹಾಯಧನ<br>ರೇಷ್ಮೆ ಹುಳು ಸಾಕಾಣಿಕೆ ಮತ್ತು ಹಿಪ್ಪುನೇರಳೆ ತೋಟಕ್ಕೆ ಉಪಕರಣ ಖರೀದಿಗೆ (ಸ್ಪ್ರೇಯರ್ ಗಳು,ಪ್ಲಾಸ್ಟಿಕ್ ಚಂದ್ರಿಕೆ, ಸೋಲಾರ್ ಲೈಟ್, ಪವರ್ ವೀಡರ್,ಬುಶ್ ಕಟ್ಟರ್ , ಹೈಗ್ರೋಮೀಟರ್ ಇತ್ಯಾದಿ) ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ / ಪಂಗಡದ ವರ್ಗದವರಿಗೆ ಕ್ರಮವಾಗಿ ಶೇಕಡ 75 ಮತ್ತು 90 ರಷ್ಟು ಸಹಾಯಧನ ನೀಡಲಾಗುತ್ತಿದೆ<br>4. ರೇಷ್ಮೆ ಹುಳು ಸಾಕಾಣಿಕೆಗೆ ಅಗತ್ಯವಾದ ಸೋಂಕು ನಿವಾರಕಗಳು, ಸಸ್ಯವರ್ಧಕಗಳು, ಸಸ್ಯಸಾರ, ಊಜಿ ನಿಯಂತ್ರಕ, ಬೇವಿನ ಎಣ್ಣೆ ಖರೀದಿಸಿ ಉಚಿತವಾಗಿ ವಿತರಿಸಲಾಗುತ್ತಿದೆ.<br>5. ಹೊಸ ನಾಟಿ, ಹುಳು ಸಾಕಾಣಿಕಾ ಮನೆ ನಿರ್ಮಾಣಕ್ಕೆ ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ / ಪಂಗಡದ ವರ್ಗದವರಿಗೆ ಕ್ರಮವಾಗಿ ಶೇಕಡ 75 ಮತ್ತು 90 ರಷ್ಟು ಸಹಾಯಧನ ನೀಡಲಾಗುತ್ತಿದೆ<br>6. ಹಿಪ್ಪುನೇರಳೆ ತೋಟಕ್ಕೆಹನಿ ನೀರಾವರಿ ಘಟಕ ಅಳವಡಿಕೆಗೆ ಎಲ್ಲಾ ವರ್ಗದವರಿಗೆ ಶೇಕಡ 90 ರಷ್ಟು ಸಹಾಯಧನ ನೀಡಲಾಗುತ್ತಿದೆ.<br>7. ದ್ವಿತಳಿ ಗೂಡು ಉತ್ಪಾದನೆ ಹಾಗೂ ಚಾಕಿ ಖರೀದಿ ವೆಚ್ಚಕ್ಕೆ ಪ್ರೋತ್ಸಾಹಧನ ನೀಡಲಾಗುತ್ತಿದೆ. |

| | | |
|---|---|---|
| ಇ) | ರಾಜ್ಯ ಸರ್ಕಾರದ ವತಿಯಿಂದ ರೇಷ್ಮೆ ಸೀರೆಯನ್ನು ತಯಾರು ಮಾಡುವ ಘಟಕ ಹಾಗೂ ಉಪ ಘಟಕಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; (ಪೂರ್ಣ ವಿವರ ನೀಡುವುದು) | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದಲ್ಲಿ ರೇಷ್ಮೆ ಸೀರೆಗಳನ್ನು ಮೈಸೂರು ರೇಷ್ಮೆ ಕಾರ್ಖಾನೆ ಮತ್ತು ರೇಷ್ಮೆ ಸಂಯೋಜಿತ ಘಟಕ 02 ಹಾಗೂ ರೇಷ್ಮೆ ನೇಯ್ಗೆ ಘಟಕ ಚನ್ನಪಟ್ಟಣದಲ್ಲಿ ಸೀರೆಗಳನ್ನು ಉತ್ಪಾದಿಸಲಾಗುತ್ತದೆ. ಆದರೆ, ಯಾವುದೇ ಉಪ ಘಟಕಗಳು ಇರುವುದಿಲ್ಲ. |
| ಈ) | ಈ ರೀತಿಯ ರೇಷ್ಮೆ ಘಟಕಗಳನ್ನು ಮುಚ್ಚುವ ಬಗ್ಗೆ ಸರ್ಕಾರ ಆಲೋಚನೆ ಮಾಡಿದೆಯೇ; (ಇದ್ದಲ್ಲಿ ವಿವರ ನೀಡುವುದು); | ಕೆ.ಎಸ್ಐಸಿ ಅಡಿಯಲ್ಲಿ ನಿರ್ವಹಿಸುತ್ತಿರುವ ರೇಷ್ಮೆ ಘಟಕಗಳನ್ನು ಮುಚ್ಚುವ ಬಗ್ಗೆ ಯಾವುದೇ ಆಲೋಚನೆ ಇರುವುದಿಲ್ಲ. |
| ಉ) | ಮೈಸೂರು ಜಿಲ್ಲೆಯ ಟಿ.ನರಸೀಪುರದ ಘಟಕದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ (ರೇಷ್ಮೆ ನೂಲು ತೆಗೆಯುವ ಘಟಕ)ವನ್ನು ಮುಚ್ಚಿ ಈ ಪ್ರದೇಶದಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ? ಮಾಹಿತಿ ನೀಡುವುದು; | ಕ್ರೀಡಾಂಗಣಕ್ಕೆ ಬೇರೆ ಪರ್ಯಾಯ ವ್ಯವಸ್ಥೆಯನ್ನು ಮಾಡುವ ಪ್ರಸ್ತಾವನೆ ಪರಿಶೀಲಿನೆಯಲ್ಲಿದ್ದು ರಾಜ್ಯದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ (KSIC) ಮೈಸೂರಿನ ಟಿ.ನರಸೀಪುರದಲ್ಲಿರುವ ಜಮೀನನ್ನು ಕ್ರೀಡಾಂಗಣ ನಿರ್ಮಾಣಕ್ಕಾಗಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನೀಡಿರುವುದನ್ನು ಕೈಬಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಕಡತ ಸಂಖ್ಯೆ: ರೇಷ್ಮೆ 86 ರೇಇವಿ 2026**

**(ಕೆ.ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

# ಅನುಬಂಧ

| ಮೈಸೂರು ಜಿಲ್ಲೆಯ ಹಿಪ್ಪುನೇರಳೆ ವಿಸ್ತೀರ್ಣ ಹಾಗೂ ರೇಷ್ಮೆ ಬೆಳೆಗಾರರ ಅಂಕಿ ಅಂಶ (ಮಾರ್ಚ್-2025ರ ಅಂತ್ಯದಲ್ಲಿದ್ದಂತೆ) | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| ಕ್ರ. ಸಂ. | ತಾಲ್ಲೂಕು | ಪ.ಜಾ | ಪ.ಪ | ಅ. ಸಂ | ವಿಕಲ ಚೇತನರು | ಇತರೆ | ಒಟ್ಟು | ಒಟ್ಟಿನಲ್ಲಿ (ಕಾಲಂ014) | | ರೇಷ್ಮೆ ಬೆಳೆಗಾರರ ವರ್ಗ | | | | | ಹಿಪ್ಪುನೇರಳೆ ವಿಸ್ತೀರ್ಣ |
| | | | | | | | | ಮಹಿಳೆಯರು | ಪುರುಷರು | ದೊಡ್ಡ | ಮಧ್ಯಮ | ಅರೆ ಮಧ್ಯಮ | ಸಣ್ಣ | ಅತೀ ಸಣ್ಣ | |
| 1 | ಮೈಸೂರು | 43 | 17 | 8 | 0 | 550 | 618 | 109 | 509 | 0 | 9 | 0 | 198 | 411 | 437.19 |
| 2 | ತಿ.ನರಸೀಪುರ | 73 | 48 | 10 | 1 | 1198 | 1330 | 226 | 1104 | 0 | 0 | 10 | 387 | 933 | 655.3 |
| 3 | ಹೆಚ್.ಡಿ. ಕೋಟೆ | 32 | 32 | 3 | 0 | 197 | 264 | 81 | 183 | 0 | 15 | 43 | 148 | 58 | 207.43 |
| 4 | ನಂಜನಗೂಡು | 46 | 26 | 4 | 0 | 601 | 677 | 86 | 591 | 1 | 39 | 65 | 357 | 215 | 578.94 |
| 5 | ಪಿರಿಯಾಪಟ್ಟಣ | 29 | 25 | 6 | 0 | 212 | 272 | 70 | 202 | 0 | 3 | 18 | 150 | 101 | 163.56 |
| 6 | ಹುಣಸೂರು | 29 | 25 | 6 | 0 | 235 | 295 | 70 | 225 | 15 | 44 | 0 | 223 | 13 | 152.31 |
| 7 | ಕೆ.ಆರ್.ನಗರ | 21 | 18 | 10 | 1 | 510 | 560 | 70 | 490 | 0 | 0 | 2 | 22 | 536 | 252.77 |
| 8 | ಸಾಲಿಗ್ರಾಮ | 7 | 1 | 0 | 0 | 137 | 145 | 21 | 124 | 0 | 0 | 0 | 5 | 140 | 70.84 |
| 9 | ಸರಗೂರು | 32 | 22 | 1 | 0 | 53 | 108 | 21 | 87 | 0 | 4 | 12 | 61 | 31 | 91.75 |
| | ಒಟ್ಟು | 312 | 214 | 48 | 2 | 3693 | 4269 | 764 | 3515 | 16 | 114 | 150 | 1551 | 2438 | 2610.09 |